ಕಡ್ಡಿಗಳನ್ನು, ಧೂಪಗಳನ್ನೂ ಹಚ್ಚಿಟ್ಟ. ಮಂಗಳಾರತಿ ಮಾಡುವ ವೇಳೆಗೆ ಇನ್ನೊಂದಷ್ಟು ಜನ ಸೇರಿದರು. ದೇವರಿಗೆ ಆರತಿ ಎತ್ತಿದ ಮೇಲೆ ಹೊರ ಬಂದು ಅವಳಿಗೂ ಆರತಿ ಮಾಡಿದ. ಅವಳು ಕಣ್ಣು ಮುಚ್ಚಿ ಕುಳಿತಿದ್ದಳು. ಅವನು ದೇವರ ಕೋಣೆಯಿಂದ ಒಂದಷ್ಟು ಮಣ್ಣಿನ ದೀಪಗಳನ್ನು ಹಚ್ಚಿ ತಂದು ರಂಗೋಲೆಯ ಸುತ್ತಲೂ ಸಮಾನ ಅಂತರದಲ್ಲಿ ಇಟ್ಟ. ದೀಪಗಳ ಸುತ್ತ ಕೆಂಪು ನಿಂಬೆ ಹೋಳುಗಳನ್ನು ಜೋಡಿಸಿದ. ಅಲ್ಲಿದ್ದವರಿಗೆಲ್ಲ ಸರಿದು ಆ ಕೋಣೆಯ ನಾಲ್ಕೂ ಮೂಲೆಗಳಲ್ಲಿ ನಿಲ್ಲಲು ಹೇಳಿದ. ನಾನು, ಗೀತಾ, ಇನ್ನೊಂದಿಬ್ಬರು ಹೆಂಗಸರು ಒಂದು ಬದಿಗೆ ಸರಿದು ನಿಂತೆವು. ದೊಡ್ಡ ಕುಂಕುಮದವನು ಕೋಣೆಯ ಲೈಟ್ ಆರಿಸಿದ.

ದೇವರ ಕೋಣೆಯ ದೀಪ ಮತ್ತು ರಂಗೋಲಿಯ ಸುತ್ತಲಿನ ದೀಪಗಳ ಬೆಳಕು ಕಣ್ಣಿಗೆ ಹೊಂದಿಕೊಳ್ಳಲು ಒಂದೆರಡು ನಿಮಿಷಗಳೇ ಬೇಕಾಯಿತು. ಅಷ್ಟು ಜನರಿದ್ದ ಆ ಚಿಕ್ಕ ಕೋಣೆಯಲ್ಲಿ ಸೆಕೆಯಾದಂತಾಗಿ ಗೀತಾ ಸೀರೆಯ ಸೆರಗಿನಿಂದ ಮತ್ತು ನಾನು ಹೊದ್ದಿದ್ದ ವೇಲಿನಿಂದ ಗಾಳಿ ಹಾಕಿಕೊಳ್ಳತೊಡಗಿದೆವು. ಅಷ್ಟರಲ್ಲಿ ದೇವಿ ತಲೆಯನ್ನು ದುಂಡಗೆ ತಿರುಗಿಸುತ್ತಾ, ಸಣ್ಣಗೆ ಹೂಂಕಾರಗಳನ್ನು ಹೊರಡಿಸುತ್ತಿದ್ದಳು. ಫಕ್ಕನೆ ಕಣ್ಣು ಬಿಟ್ಟವಳೇ ಯಾರೋ ತಳ್ಳಿದರೇನೋ ಎನ್ನುವಂತೆ ಒಂದು ದೀಪಗಳನ್ನಿಟ್ಟಿದ್ದ ರಂಗೋಲಿಯ ಮಧ್ಯ ಕುಳಿತಳು. ಸ್ವಲ್ಪ ಭಯವಾದಂತಾಗಿ ಗೀತಾಳಿಗೆ ಇನ್ನಷ್ಟು ಅಂಟಿಕೊಂಡು ನಿಂತೆ. ಒಮ್ಮೆಗೆ ಆ ದೇವಿ ಜೋರಾಗಿ, 'ಹೂಂ ಚಾಮುಂಡಮ್ಮ ನಾನು, ಲೆಕ್ಕಕ್ಕಿಲ್ದೇ ಹೋಯ್ತಾ ನಿಮ್ಗೆ. ಇವತ್ತು ಬಂದ್ರಾ ನನ್ನ ದರ್ಶನಕ್ಕೆ' ಎಂದು ಕೋಣೆಯ ನಾಲ್ಕು ಮೂಲೆಯಲ್ಲೂ ನಿಂತಿದ್ದವರತ್ತ ದೊಡ್ಡದಾಗಿ ಕಣ್ಣುಬಿಟ್ಟಳು. ಆ ದೀಪಗಳ ಬೆಳಕಲ್ಲಿ ಗಾಢವಾಗಿ ಕಾಡಿಗೆ ಬಳಿದ ಆ ಕಣ್ಣುಗಳು ಕೆಂಪಗೆ ಹೊಳೆಯುತ್ತಾ ನಿಜಕ್ಕೂ ಭಯಂಕರವೆನಿಸಿತು. ಇನ್ನಷ್ಟು ಮತ್ತಷ್ಟು ಜೋರಾಗಿ ಪದಗಳು ಅರ್ಥವಾಗದಂತೆ ಅರಚಿದ ಕೂಗು ಪುಟ್ಟ ಕೋಣೆಯ ಮೂಲೆಗಳಲ್ಲಿ ನಿಂತವರಿಗೆ ಎದೆ ಝುಲ್ಲೆನಿಸಿತು. ಅದೇ ಶಬ್ದ ಒಂದ್ಹತ್ತು ಸೆಕೆಂಡುಗಳ ಕಾಲ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿತ್ತು. ಆ ಕಿರುಚಾಟಕ್ಕೆ ಬೆಚ್ಚಿದ ಗೀತಾ ನಡುಗುತ್ತಾ ತನ್ನ ಎರಡೂ ಕೈಗಳಿಂದ ನನ್ನ ತೋಳನ್ನು ಬಲವಾಗಿ ಹಿಡಿದಳು. ದೇವಿ ತಲೆಯಾಡಿಸಿದ ರಭಸಕ್ಕೆ ಮುಖದ ಮೇಲೂ ಕೂದಲು ಆವರಿಸುತ್ತಿತ್ತು. ಧೂಪದ ಹೊಗೆ, ಗಾಳಿಯಾಡದ ಕೋಣೆ, ಕೆಂಪು ಬಣ್ಣವೇ ಮೂರ್ತಿವೆತ್ತಂತಿದ್ದ ಅವಳು, ಅವಳ ತಾರಕ ಹೂಂಕಾರಗಳು, ದೊಡ್ಡ ದೊಡ್ಡದಾಗಿ ಅರಳಿಸುತ್ತಿದ್ದ ಕಣ್ಣುಗಳು, ಅವಳ ಸುತ್ತ ಇದ್ದ ಕೆಂಪು ನಿಂಬೆ ಹೋಳುಗಳು ನನ್ನೆದೆಯಲ್ಲೂ ನಡುಕ ತರಿಸಿದವು. ಬೆನ್ನಿನಲ್ಲಿ ಬೆವರು ತಣ್ಣಗೆ ಇಳಿಯುತ್ತಿತ್ತು. ಅವಳ ಹೂಂಕಾರಗಳು ಮತ್ತಷ್ಟು ತಾರಕಕ್ಕೇರುತ್ತಿದ್ದಾಗ ದೊಡ್ಡ ಕುಂಕುಮದವನು, 'ದೇವಿಗೆ ಕಾಣಿಕೆ ಇಟ್ಟು ನಿಮ್ಮ ನಿಮ್ಮ ಪ್ರಶ್ನೆ ಕೇಳಬಹುದು' ಎಂದ.

ನನಗೆ ತಡವಾಗಬಹುದೆಂದು ಗೀತಾ ತುಸುವೇ ನಡುಗುತ್ತಿದ್ದ ಬೆರಳುಗಳಿಂದ ಪರ್ಸು ತೆಗೆದು ನೂರರ ಒಂದು ನೋಟು ತೆಗೆದು, ತಾನೇ ಮೊದಲು ಪ್ರಶ್ನೆ ಕೇಳಲು ಮುಂದೆ ಹೋದಳು. ಅವಳಿಗಿಂತ ಮೊದಲು ಮತ್ತೊಂದು ಮೂಲೆಯಲ್ಲಿ ನಿಂತಿದ್ದ ಮಧ್ಯ ವಯಸ್ಸಿನ ಗಂಡಸೊಬ್ಬ ದೇವಿಯ ಬಳಿ ಇದ್ದ ತಟ್ಟೆಯಲ್ಲಿ ನೂರರ ನೋಟು ಇಡುತ್ತಿದ್ದಂತೆ ದೇವಿಯ ಆರ್ಭಟ ಹೆಚ್ಚಾಯಿತು. ದೊಡ್ಡ ಕುಂಕುಮದವನು 'ಏನ್ರೀ ನೀವು, ಏನಂದುಕೊಂಡಿದ್ದೀರಿ ನಮ್ಮ ಚಾಮುಂಡಮ್ಮನ್ನ. ಐನೂರಾದರೂ ಇಡಬಾರದಾ? ದೇವರ ಮುಂದೆ ಜಿಪುಣತನ ಮಾಡ್ತೀರಾ?' ಎಂದು ಜೋರು ಮಾಡಿದ. ತಬ್ಬಿಬ್ಬಾದವನು ಜೇಬಿನಿಂದ ಐನೂರರ ನೋಟು ತೆಗೆದು ತಟ್ಟೆಯಲ್ಲಿ ಇಟ್ಟ. ಗೀತಾ ಪರ್ಸು ತಡಕಾಡಿದಳು, ಐನೂರಿರಲಿಲ್ಲ. ಮೊಣಕೈನಿಂದ ತಿವಿದಳು. ನನ್ನ ಪರ್ಸಿನಿಂದ ಐನೂರರ ನೋಟು ತೆಗೆದು ಕೊಟ್ಟೆ. ದೇವಿ ದುಡ್ಡಿಟ್ಟವನನ್ನೇ ದುರುಗುಟ್ಟಿಕೊಂಡು ನೋಡುತ್ತಾ, 'ಹೇಳು, ಏನು ತಪ್ಪು ಮಾಡಿದ್ಯಾ, ಹೂಂ ಹೇಳು' ಎಂದು ಅರಚಿದಳು. ಆ ವ್ಯಕ್ತಿ ಹೆದರಿ ಒಂದು ಹೆಜ್ಜೆ ಹಿಂದೆ ಸರಿದ. ಥಟ್ಟನೆ ಕುಳಿತಲ್ಲಿಂದ ಎದ್ದು ದೇವಿ ಅವನ ಕೂದಲು ಹಿಡಿದುಬಿಟ್ಟಳು. ಅವನ ಕಣ್ಣಲ್ಲಿ ಇರಬಹುದಾದ ಭಯವನ್ನು ಆ ಕಡಿಮೆ ಬೆಳಕಲ್ಲೂ ನಾನು ಕಂಡೆ. 'ಹೇಳು, ಹೇಳು' ಎಂದು ದೇವಿ ಕೂಗುತ್ತಲೇ ಇದ್ದಳು. ಅಷ್ಟರಲ್ಲೇ ಗೀತಾ ಬೆವರುತ್ತಿದ್ದ ಕೈಯಿಂದ ನನ್ನ ಕೈ ಹಿಡಿದು ಬಿರಬಿರನೆ ಆ ಕೋಣೆಯಾಚೆ, ಮನೆಯಾಚೆ, ಗೇಟಿನಾಚೆ ನಡೆದೇಬಿಟ್ಟಳು. ●